KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ಯಕ್ಷಗಾನದ ಮೇಲೆ ಸಿನೆಮಾ ಮಾಧ್ಯಮದ ಪ್ರಭಾವ: ಒಂದು ಅಧ್ಯಯನ

**ಡಾ.ಈಶ್ವರಚಂದ್ರ ಬಿ.ಜಿ.**

ಸಂಶೋಧನಾ ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,

ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ–577451, ಶಿವಮೊಗ್ಗ.

**ಡಾ.ಸತೀಶ್ ಕುಮಾರ್**

ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ,

ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ–577451, ಶಿವಮೊಗ್ಗ.

***ಸಾರಾಂಶ***

*ಯಕ್ಷಗಾನ ಮತ್ತು ಸಿನೆಮಾ ಎರಡೂ ಪ್ರಮುಖ ಮಾಧ್ಯಮಗಳು. ಕರ್ನಾಟಕದ ಶ್ರೇಷ್ಠ ಕಲೆಯಾದ ಯಕ್ಷಗಾನ ಒಂದು ಸಾಂಪ್ರದಾಯಿಕ ಮಾಧ್ಯಮವಾದರೆ, ಸಿನೆಮಾ ಆಧುನಿಕ ಮಾಧ್ಯಮವಾಗಿ ಪ್ರಸಿದ್ಧಿ ಪಡೆದಿದೆ. ಸಿನೆಮಾದ ವ್ಯಾಪ್ತಿ ಜಗತ್ತಿನಲ್ಲಿ ಅತ್ಯಂತ ವಿಶಾಲವಾದದ್ದಾದರೆ, ಯಕ್ಷಗಾನದ ವ್ಯಾಪ್ತಿ ಒಂದು ಪ್ರದೇಶದಲ್ಲಿ ನಿರ್ದಿಷ್ಟ ವರ್ಗವನ್ನು ಪ್ರಭಾವಿಸುವಂಥದ್ದು. ಆದರೆ ಎರಡೂ ಮಾಧ್ಯಮಗಳು ಸೃಷ್ಟಿ ಮಾಡುವ, ಪ್ರೇಕ್ಷಕನಲ್ಲಿ ಉಂಟುಮಾಡುವ ರಸೋತ್ಪತ್ತಿ, ಭಾವದೀಪ್ತಿಗಳು ಒಂದೇ ತೆರನಾದದ್ದು. ಆಧುನಿಕ ಕಾಲಘಟ್ಟದಲ್ಲಿ ಯಕ್ಷಗಾನದಂತಹ ಒಂದು ಪಾರಂಪರಿಕ ಮಾಧ್ಯಮ ಆಧುನಿಕ ಸಂವಹನ ಮಾಧ್ಯಮಗಳಿಂದ ವಿವಿಧ ರೀತಿಯಲ್ಲಿ ಪ್ರಭಾವಗಳನ್ನು ಪಡೆದಿದ್ದು, ಬಹಳಷ್ಟು ವಿಧದಲ್ಲಿ ಬದಲಾವಣೆಗೆ ಕಾರಣವಾಗಿದೆ. ಸಿನೆಮಾವೂ ಯಕ್ಷಗಾನವನ್ನು ಬಹುವಾಗಿ ಪ್ರಭಾವಿಸಿದೆ. ಇದಕ್ಕೆ ಯಕ್ಷಗಾನದಲ್ಲಿ ಬದಲಾದ ಕೆಲವೊಂದು ರಂಗಕ್ರಮಗಳು, ಪಾರಂಪರಿಕ ಶೈಲಿಗಳು, ಯಕ್ಷಗಾನದ ಪ್ರದರ್ಶನದ ಸಮಯ–ಪ್ರಸ್ತುತಿಗಳಲ್ಲಿ, ಪ್ರಸಂಗದ ಮೇಲೂ ಆಗಿರುವುದು ಉದಾಹರಣೆಯಾಗಿ ಹೆಸರಿಸಬಹುದು. ಪ್ರಸಂಗ ಸಾಹಿತ್ಯ, ಆಹಾರ್ಯ, ಅಭಿನಯ, ಗಾನವೈಭವ, ನಾಟ್ಯ ವೈಭವ ಮುಂತಾದ ಯಕ್ಷಗಾನದ ವಿವಿಧ ಆಯಾಮಗಳ ಮೇಲೆ ಸಿನೆಮಾದ ಪ್ರಭಾವ ಕುರಿತು ವಿವರವಾದ ವಿಶ್ಲೇಷಣೆ ಈ ಸಂಶೋಧನಾ ಪ್ರಬಂಧದಲ್ಲಿದೆ.*

**ಪ್ರಮುಖ ಪದಗಳು:** ಯಕ್ಷಗಾನ, ಸಿನೆಮಾ, ಪಾರಂಪರಿಕ ಮಾಧ್ಯಮ, ಆಧುನಿಕ ಮಾಧ್ಯಮ, ಪ್ರಸಂಗ ಸಾಹಿತ್ಯ, ಆಹಾರ್ಯ, ತಾರಾಮೌಲ್ಯ, ಸಿನೆಮಾದ ಪ್ರಭಾವ.



Full text of this paper can be downloaded online https://www.thesocialsciencedialogue.com/archive